ಶ್ರೀ ಎಂ. ವೀರಪ್ಪಮೊಯಲಿ (ಮುಖ್ಯ ಮಂತ್ರಿಗಳು):–

ಆ. ಹೌದು

ಆ. ಉದ್ಭವಿಸುವುದಿಲ್ಲ. ಕಾರಣ ಕರ್ನಾಟಕ ಭೂ ಸೇನಾ ನಿಗಮವು ಸ್ವಯಂ ನಡೆಸಬಲ್ಲ ತತ್ವದೊಂದಿಗೆ ರೂಪಿತಗೊಂಡಿದೆ. ಆದ್ದರಿಂದ ಅದು ಸ್ವಂತ ಆವಲಂಬನೆಗೆ ಒಳಪಟ್ಟಿರುತ್ತವೆ.

ಇ. ಭೂ ಸೇನಾ ನಿಗಮದವರು ಸಾಮಾನ್ಯವಾಗಿ ಗುಣ ಮಟ್ಟದ ಕೆಲಸ ಮಾಡುತ್ತಿದ್ದಾರೆ.

ಈ. ಪ್ರಶ್ನೆ 'ಇ' ನಲ್ಲಿ ಉತ್ತರಿಸಿದಂತೆ ಇದು ಉದ್ಭವಿಸುವುದಿಲ್ಲ.

ಉ . ಇಲ್ಲ.

ಊ. ನಿಜವಲ್ಲ. ಇಂಥಹ ಮನೆಗಳನ್ನು ಕಟ್ಟಲು ಕರ್ನಾಟಕ ಗೃಹ ಮಂಡಳಿಗೆ ವಹಿಸಲು ಸರ್ಕಾರ ಕಾರ್ಯ ರೀತಿ ಇದ್ದಿತ್ತು.

ಋ. ಸ್ವಲ್ಪ ಮಟ್ಟಿಗೆ ಇದು ನಿಜ. ಆದರೆ ಹೆಚ್ಚಿನ ಸಂಖ್ಯೆಯ ಕೆಲಸಗಳು ಉತ್ತರ ಕರ್ನಾಟಕದಲ್ಲಿನ ಹೈದರಾಬಾದ್, ಕರ್ನಾಟಕ ಜಿಲ್ಲೆಗಳಾದ ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಮತ್ತು ಬೀದರ್‌ಗಳಲ್ಲಿ ಕಾಮಗಾರಿಗಳು ಪೂರ್ಣವಾಗಿ ಮುಗಿದಿದೆ ಅಥವಾ ಉತ್ತಮ ಪ್ರಗತಿಯಲ್ಲಿರುತ್ತದೆ. ಹೆಚ್ಚಿನ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಇತರೆ ಜಿಲ್ಲೆಗಳಾದ ಧಾರವಾಡ, ಬಿಜಾಪುರ, ಬೆಳಗಾವಿ ಮತ್ತು ಕಾರವಾರಗಳಲ್ಲಿ ಹಣಕಾಸಿನ ಮುಗ್ಗಟ್ಟಿನಿಂದ ಕಾಮಗಾರಿಗಳ ಪ್ರಗತಿಯು ಕುಂಠಿತಗೊಂಡಿರುತ್ತದೆ. ಅಪೂರ್ಣವಾಗಿರುವ ಕಾಮಗಾರಿಗಳನ್ನು ಸಂಪೂರ್ಣಗೊಳಿಸಲು ಮತ್ತು ಅದಕ್ಕೆ ಬೇಕಾಗಿರುವ ಹಣವನ್ನು ಒದಗಿಸಲು ಪ್ರಯತ್ನ ಮಾಡಲಾಗುತ್ತಿದೆ.

ಬೆಳಗಾಂ ಜಿಲ್ಲೆಯ ಗಡಿಪ್ರದೇಶದ ಹಳ್ಳಿಗಳಿಗೆ ಬಾರ್ಡರ್ ಗ್ರಾಂಟ್

556 (994): ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾವಿ ಜಿಲ್ಲೆಯ ಗಡಿ ಪ್ರದೇಶದಲ್ಲಿರುವ ಕನ್ನಡ ಹಳ್ಳಿಗಳಿಗೆ ಈ ವರ್ಷದ ಬಾರ್ಡರ್ ಗ್ರಾಂಟಿನಲ್ಲಿ ಎಷ್ಟು ಹಣ ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ ?

ಆ. ಅದರಲ್ಲಿ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು ಮತ್ತು ಯಾವ ಯಾವ ಕೆಲಸಗಳಿಗೆ ಎಷ್ಟು ಎಷ್ಟು ಹಣ ಖರ್ಚಾಗಿರುವುದು ? (ಸಂಪೂರ್ಣ ವಿವರ ನೀಡುವುದು):

ಇ. ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕಿನ ಗಡಿ ಪ್ರದೇಶದಲ್ಲಿರುವ ಕನ್ನಡ ಹಳ್ಳಿಗಳಿಗೆ ಬಾರ್ಡರ್ ಗ್ರಾಂಟ್‌ನಲ್ಲಿ ಹಣ ಬಿಡುಗಡೆ ಮಾಡುವಲ್ಲಿ ಹಾಗೂ ಕೆಲಸಗಳನ್ನು ತೆಗೆದುಕೊಳ್ಳುವಲ್ಲಿ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ. ಹಾಗಿದ್ದಲ್ಲಿ ಸರ್ಕಾರದವರು ಕೆಲಸ ತೆಗೆದುಕೊಳ್ಳುವಲ್ಲಿ ಅನ್ಯಾಯವಾಗದಂತೆ ಎಚ್ಚರವಹಿಸುವರೆ:

ಉ. ಬೆಳಗಾವಿ ತಾಲ್ಲೂಕಿನ ಪೈಕಿ ಅರಳಿಕಟ್ಟೆ ಗ್ರಾಮವು ಒಂದು ಅಚ್ಚ ಕನ್ನಡ ಹಳ್ಳಿಯಿದ್ದು ಅಲ್ಲಿ

ಬಾರ್ಡರ್ ಗ್ರಾಂಟಿನಿಂದ ಯಾವುದೇ ಕೆಲಸ ತೆಗೆದುಕೊಂಡಿರುವುದಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಅಲ್ಲಿ ಒಂದು ಸಮುದಾಯ ಭವನ ಕಟ್ಟಲಾಗುವುದೇ ?

ಊ. ಇನ್ನು ಕನ್ನಡ ಮುಂದೆಯಾದರೂ ಬಾರ್ಡರ್ ಗ್ರಾಂಟಿನಂದ ಕೆಲಸಗಳನ್ನು ತೆಗೆದುಕೊಳ್ಳಲು ಸೂಚಿಸಲು ಅದಕ್ಕೆ ಕನ್ನಡ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಿ ಎಲ್ಲರಿಗೂ ಅನ್ಯಾಯವಾಗದಂತೆ ನೋಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ:

ಋ. ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಪೈಕಿ ತೋಲಗಿ ಗ್ರಾಮದಲ್ಲಿ ಯುವಕ ಮಂಡಳ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ರಂಗದೇವರಾಯಲು (ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಅ. ಬೆಳಗಾವಿ ಜಿಲ್ಲೆಯ ಐದು ಗಿಡ ತಾಲ್ಲೂಕುಗಳಿಗೆ 62.50 ಲಕ್ಷ ರೂ.ಗಳು.

ಆ. ಬಿಲ್ಲುಗಳನ್ನು ಪಾವತಿ ಮಾಡಬೇಕಾಗಿದೆ.

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

ಉ. ಇಲ್ಲ.

ಊ. ಪರಿಗಣಿಸಲಾಗುವುದು.

ಋ. ಪ್ರಸ್ತಾವನೆ ಬಂದರೆ ಪರಿಶೀಲಿಸಲಾಗುವುದು.

ಗ್ರಾಮೀಣ ಪ್ರದೇಶಗಳಲ್ಲಿ ಜನಸಂಖ್ಯೆ ಆಧಾರದ ಮೇಲೆ ಆಹಾರ ವಸ್ತುಗಳ ವಿತರಣೆ.

558 (978): ಶ್ರೀ ಡಿ.ಆರ್. ಪಾಟೀಲ್, (ಗದಗ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-?

ಅ. ಪಟ್ಟಣ ಪ್ರದೇಶದಲ್ಲಿ ಕುಟುಂಬದ ಜನಸಂಖ್ಯೆ ಆಧಾರದ ಮೇಲೆ ಸಕ್ಕರೆಯನ್ನು ಕೊಟ್ಟ ಹಾಗೇ ಉಳಿದ ಪ್ರದೇಶಗಳಲ್ಲಿ ಸಹ ಆಹಾರ ವಸ್ತುಗಳನ್ನು ಕುಟುಂಬದ ಜನಸಂಖ್ಯೆ ಆಧಾರದ ಮೇಲೆ ಕೂಡಲು ಇರುವ ತೊಂದರೆಯೇನು ?

ಆ. ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು:

ಇ. ಆದೇ ರೀತಿ ಗ್ರಾಮೀಣ ಪ್ರದೇಶಗಳಲ್ಲಿ ಸಹೆತ ಪಡಿತರ ವಸ್ತುಗಳನ್ನು ಕುಟುಂಬದಲ್ಲಿ ಇರುವ ಜನಸಂಖ್ಯೆ ಆಧಾರದ ಮೇಲೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸಬರಾಜು ಸಚಿವರು):–

ಅ. ಬೆಂಗಳೂರು ನಗರವನ್ನು ಹೊರತುಪಡಿಸಿ ಎಲ್ಲಾ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ಪಡಿತರ ಚೀಟಿವಾರು ಪಡಿತರ ವಸ್ತುಗಳನ್ನು ನಿಗಧಪಡಿಸಲಾಗುತ್ತಿದೆ. ರಾಜ್ಯಕ್ಕೆ ಹಂಚಿಕೆಯಾಗುತ್ತಿರುವ ಆಹಾರ ಧಾನ್ಯಗಳ, ಸಕ್ಕರೆ ಇತ್ಯಾದಿಗಳ ಪ್ರಮಾಣ ಅವಶ್ಯಕತೆಗಿಂತ ಅತ್ಯಂತ